ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಸ್ವಚ್ಛ ಭಾರತ ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ | ಸ್ವಚ್ಛ ಸಂಕೀರ್ಣ | ಸ್ವಚ್ಛಮೇವ ಜಯತೇ | ಜಲೋತ್ಸವ ಮನೆ ಮನೆಗೆ ಗಂಗೆ | ಮನೆ ಮನೆಗೆ ಗಂಗೆ ಜಲ ಜೀವನ್ ಮಿಷನ್

## ಸಿರಿಗೆರೆ ಗ್ರಾಮ ಪಂಚಾಯಿತಿ ಭಾಗದ ಜನರಿಗೆ

# ವರದಾನವಾದ ಜಲ ಜೀವನ್ ಮಿಷನ್









ಚಿತ್ರದುರ್ಗ ಜಿಲ್ಲೆಯಲ್ಲಿ 06 ತಾಲ್ಲೂಕು 189 ಗ್ರಾಮ ಪಂಚಾಯಿತಿ, 3,80,788 ಮನೆಗಳು ಹಾಗೂ 16,23,047 ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ಸಿರಿಗೆರೆ ಗ್ರಾಮ ಪಂಚಾಯಿತಿಯೂ ಒಂದು, ಇದು ತಾಲೂಕು ಕೇಂದ್ರ ಸುಮಾರು 27 ಕಿ.ಮೀ ದೂರದಲ್ಲಿದೆ.

ಈ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಜನರಿಗೆ ಕುಡಿಯುವ ನೀರಿನ ಅಭಾವ ಮೊದಲಿನಿಂದಲೂ ಕಾಡುತ್ತಲೇ ಇತ್ತು. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಜಮ್ಮೇನಹಳ್ಳಿ ಗ್ರಾಮದಲ್ಲಿ ಪೂರ್ವಜರು ಎರಡು ಬಾವಿ ನಿರ್ಮಿಸಿದ್ದರು. ನೀರಿಗಾಗಿ ಗ್ರಾಮಸ್ಥರು ಈ ಎರಡು ಬಾವಿಯ ಮೇಲೆ ಅವಲಂಬಿತವಾಗಿದ್ದರು.

ಇನ್ನು ಬೇಸಿಗೆ ಕಾಲದಲ್ಲಿ ಈ ಬಾವಿಗಳ ನೀರು ಬತ್ತಿ ಹೋಗುತ್ತಿತ್ತು. ಈ ಕಾರಣಕ್ಕಾಗಿ 1980 ನೇ ಸಾಲಿನಲ್ಲಿ ನಾಲ್ಕು ಕೊಳವೆ ಬಾವಿ ಕೊರೆಸಲಾಯಿತು. ಆದರೆ ಮಳೆಯ ಕೊರತೆಯಿಂದ ನೀರು ಬತ್ತಿ ಹೋಗಿತ್ತು. ಇದಾದ ಬಳಿಕ ಮತ್ತೆ 4 ಕೊಳವೆ ಬಾವಿಯನ್ನು ಗ್ರಾಮ ಪಂಚಾಯಿತಿ ವತಿಯಿಂದ ಕೊರೆಸಲಾಯಿತು. ಈ ಬಾರಿಯೂ ಮಳೆಯ ಕೊರತೆಯಿಂದ ನೀರು ಬತ್ತಿ ಹೋಗಿ ತಳ್ಳುವ ಗಾಡಿಯ ಮೂಲಕ, ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿತ್ತು.

ಇಲ್ಲಿದ್ದ ನೀರಿನ ಸಮಸ್ಯೆಗೆ ಪರಿಹಾರವಾಗಿ ಬಂದಿದ್ದು ಜಲ ಜೀವನ್ ಮಿಷನ್ ಯೋಜನೆ. ಜೆಜೆಎಂ ನಿಂದ ಪ್ರತಿ ಮನೆಗಳಿಗೆ ಕಾರ್ಯಾತ್ಮಕ ಗೃಹ ನಳ ಸಂಪರ್ಕ ನೀಡಿರುವುದರಿಂದ ಗ್ರಾಮದ ಜನರಿಗೆ ಶುದ್ಧ ಕುಡಿಯುವ ನೀರು ದೊರಕಿತು ಹಾಗೂ ಸಾರ್ವಜನಿಕರ ಆರೋಗ್ಯವೂ ಸುಧಾರಿಸಿದೆ.




## ಅನುಷ್ಠಾನದ ಸಮಯದಲ್ಲಿ ಎದುರಾದ ಸಮಸ್ಯೆಗಳು

ಜಲ ಜೀವನ್ ಮಿಷನ್ ಅನುಷ್ಠಾನದ ವೇಳೆ ಗ್ರಾಮದ ಜನರಿಗೆ ಸರಿಯಾದ ಮಾಹಿತಿ ಕೊರತೆಯಿಂದಾಗಿ ಗ್ರಾಮದಲ್ಲಿ ಯೋಜನೆಯ ಅನುಷ್ಠಾನಕ್ಕೆ ಅತೀವವಾದ ವಿರೋಧ ಸೃಷ್ಠಿಯಾಗಿತ್ತು.

ಇನ್ನು ಜೆಜೆಎಂ ಯೋಜನೆಯಲ್ಲಿ 55 ಲೀಟರ್ ಎಲ್.ಪಿ.ಸಿ.ಡಿ ನೀರನ್ನು ಮಾತ್ರ ಒಬ್ಬ ವ್ಯಕ್ತಿಗೆ ಪೂರೈಸುವುದು ಹಾಗೂ ಮೀಟರ್ ಓಡಿದಷ್ಟು ನೀರಿನ ಕಂದಾಯವನ್ನು ಕಟ್ಟಬೇಕಾಗುತ್ತದೆ ಎಂಬುದಾಗಿ ಸಾರ್ವಜನಿಕರಲ್ಲಿ ಭಯದ ವಾತಾವರಣ ಸೃಷ್ಟಿಯಾಗಿತ್ತು.

ಇದಷ್ಟೇ ಅಲ್ಲದೆ ಜಲ ಜೀವನ್ ಮಿಷನ್ ಯೋಜನೆಯಲ್ಲಿ ನದಿಯ ಕಲುಷಿತ ನೀರನ್ನೆ ನೇರವಾಗಿ ನೀಡಲಾಗುತ್ತದೆ ಎಂಬ ಅಪನಂಬಿಕೆಯೂ ಜನರಲ್ಲಿತ್ತು.

ಆದರೆ ಮಾಹಿತಿ ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳ ಮೂಲಕ ಇದೆಲ್ಲದರ ಬಗ್ಗೆ ಸಂಪೂರ್ಣ ಮಾಹಿತಿ ನೀಡಿ ಜನರ ಗೊಂದಲವನ್ನು ಪರಿಹರಿಸುವುದರ ಜೊತೆಗೆ ನೀರಿನ ಸಮುದಾಯ ವಂತಿಕೆ ಸಂಗ್ರಹಣೆಯನ್ನು ಮಾಡಲಾಗಿದೆ.

ಗ್ರಾಮೀಣ ಭಾಗದ ಜನರಿಗೆ ಶುದ್ಧ ಕುಡಿಯುವ ನೀರಿನ ಬಗ್ಗೆ ಮಾಹಿತಿ ನೀಡಿ, ಜಾಗೃತಿ ಮೂಡಿಸುವುದು ಅತ್ಯಗತ್ಯ. ಈ ನಿಟ್ಟಿನಲ್ಲಿ ಬೋರ್ ವೆಲ್ ನೀರಿನ ಅತಿಯಾದ ಬಳಕೆಯಿಂದ ಎದುರಾಗುವ ಆರೋಗ್ಯ ಸಮಸ್ಯೆಗಳ ಬಗ್ಗೆ ಮೊದಲಿಗೆ ಜಾಗೃತಿ ಮೂಡಿಸಲಾಯಿತು.

ಕಾರ್ಯಾತ್ಮಕ ಗೃಹ ನಳ ಸಂಪರ್ಕದಿಂದ ಗ್ರಾಮದ ಜನರು ಸಂತಸ ವ್ಯಕ್ತ ಪಡಿಸುತ್ತಿದ್ದಾರೆ. ಶುದ್ಧ ಕುಡಿಯುವ ನೀರಿನಿಂದ ಸಿರಿಗೆರೆ ಗ್ರಾಮ ಪಂಚಾಯಿತಿ ಭಾಗದ ಜನರ ಬದುಕು ಬದಲಾಗಿದೆ.

**ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಪಟ್ಟ ಸಮಸ್ಯೆಗಳಿದ್ದಲ್ಲಿ ಕರೆ ಮಾಡಿ:** **9480985555**